ನಿಘಂಟುಗಳನ್ನು ಇಲ್ಲಿ ಸ್ಮರಿಸಬೇಕು. ಮುದೇನೂರ ಸಂಗಣ್ಣನವರ 'ಚಿಗಟೇರಿ ಪದಕೋಶ'ವು ಮತ್ತೊಂದು ಹೆಜ್ಜೆ ಮುನ್ನಡೆದು, ಪ್ರತಿಯೊಂದು ಊರಿಗೂ ಕನ್ನಡದ ಚಹರೆ ಬದಲಾಗುತ್ತದೆ ಮತ್ತು ವಿಶಿಷ್ಟವಾಗುತ್ತದೆ ಎಂಬ ದಿಟವನ್ನು ಸಾರುತ್ತದೆ. ಆದರೆ ನಿಘಂಟಿನೊಳಗಿನ ಶಬ್ದಗಳು, ಜನರ ಮಾತುಕತೆಯಲ್ಲಿ ಮತ್ತು ಬರಹದಲ್ಲಿ ಹೇಗೆ ಸೇರಿಕೊಳ್ಳುತ್ತವೆ ಎನ್ನುವುದು ಅಲಾಯಿದ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಪ್ರಧಾನಧಾರೆ ಎನಿಸಿರುವ ಮೈಸೂರಗನ್ನಡವನ್ನು ಬಳಸುವ ಸುದ್ದಿ ಮಾಧ್ಯಮಗಳು, ಕೆಲವೊಮ್ಮೆ ಒಳಗನ್ನಡಗಳಿಗೆ ಅವಕಾಶ ಕಲ್ಪಿಸುವುದುಂಟು. ಕೆಲವು ವರ್ಷಗಳ ಹಿಂದೆ 'ಪ್ರಜಾವಾಣಿ'ಯಲ್ಲಿ ಧಾರವಾಡಗನ್ನಡದಲ್ಲಿ ಪ್ರಕಟವಾಗುತ್ತಿದ್ದ 'ಚಹಾದ ಜೋಡಿ ಚೂಡದ್ಹಾಂಗ' ಅಂಕಣ ಸ್ಮರಿಸಬೇಕು. ಇದು ರಾಜಧಾನಿಯ ಪತ್ರಿಕೆಗಳಲ್ಲಿ ಪ್ರಾದೇಶಿಕ ಕನ್ನಡದ ಚಹರೆ ಗಳಿಸಿದ ಸಾಂಕೇತಿಕ ಪ್ರಾತಿನಿಧ್ಯವನ್ನು ಸೂಚಿಸುತ್ತದೆ. ಬೇಂದ್ರೆಯವರ 'ಹುಬ್ಬಳ್ಳಿಯಾಂವ' ಕವನದಿಂದ ಈ ಅಂಕಣದ ಶೀರ್ಷಿಕೆಯು ಬಂದಿದೆ. 'ವಾರದಾಗ ಮೂರುಸರತಿ ಬಂದು ಹೋದಂವಾ' ವ್ಯಾಪಾರಿಯೊಬ್ಬ, ಉಪಪತ್ನಿಯ ಸಂಬಂಧವನ್ನು ಬಣ್ಣಿಸುವುದಕ್ಕೆ ಬಳಸುತ್ತಿರುವ ಈ ಉಪಮೆ, ಸಾಂಕೇತಿಕ ಪ್ರಾತಿನಿಧ್ಯದ ಸಮಸ್ಯೆಗಳನ್ನೂ ಧ್ವನಿಸುವಂತಿದೆ. ಚಹಾವನ್ನು ರುಚಿಕರವಾಗಿಸಲು ಜೊತೆಗಿಡಲಾದ ಚೂಡಾದ ಸ್ಥಾನವು ಕೊನೆಗೂ ಅಧೀನವಾಗಿಯೇ ಉಳಿಯುತ್ತದೆ. ಮಂಗಳೂರು–ಧಾರವಾಡ ಕನ್ನಡವಾಡುವ ಪಾತ್ರಗಳನ್ನು ರಂಜನೆಗಾಗಿ, ಗೇಲಿಗಾಗಿ, ವೈವಿಧ್ಯಕ್ಕಾಗಿ ತರುವ ಜನಪ್ರಿಯ ಚಲನಚಿತ್ರ, ನಾಟಕ, ಧಾರಾವಾಹಿ ಹಾಗೂ ನಗೆಹಬ್ಬಗಳಲ್ಲಿ, ಈ ಸಾಂಕೇತಿಕ ಪ್ರಾತಿನಿಧ್ಯವು ಮತ್ತೂ ಸಮಸ್ಯಾತ್ಮಕವಾಗಿದೆ. ಜನಪ್ರಿಯ ಸಿನಿಮಾಗಳಲ್ಲಿ ಬರುವ 'ನಮ್ದುಕ್ಕೆ ಪ್ಯಾರ್‌ಗೆ ಆಗ್‌ಬುಟ್ಟೈತೆ' ತರಹದ ಹಾಡುಗಳೊಳಗಿನ ಕೃತಕ ಕನ್ನಡವು, ಯಾವ ಮುಸ್ಲಿಮರದ್ದು? ಉರ್ದು ತಿಳಿಯದ – ಮಲೆಯಾಳ, ಬ್ಯಾರಿ, ಕೊಂಕಣಿ, ಕನ್ನಡ ಮನೆಮಾತಿನ ಮುಸ್ಲಿಮರು ಇದ್ದಾರೆಂಬುದನ್ನು ಇಂತಹ ಹಾಡುಗಳು ಮರೆಮಾಚುತ್ತವೆ. ಕೈಲಾಸಂ ಕೂಡ ತಮ್ಮ ನಾಟಕಗಳಲ್ಲಿ ಮುಸ್ಲಿಮರ ಅಥವಾ ಕೋಮಟಿಗರ ಕನ್ನಡವಾಡುವ ಸ್ಟೀರಿಯೋಟೈಪ್ ಪಾತ್ರಗಳನ್ನು ಸೃಷ್ಟಿಸಿದರು. ಇವರಿಗೆಲ್ಲ ಹೋಲಿಸಿದರೆ ಕಂಪನಿ ನಾಟಕಗಳೇ ವಾಸಿ. ಅಲ್ಲಿ ಸ್ಟೀರಿಯೋಟೈಪು ಪಾತ್ರಗಳು ಮತ್ತು ಅವರಿಗಾಗಿ ಸೃಷ್ಟಿಸಿದ ಕೃತಕ ಕನ್ನಡಗಳು ಕಡಿಮೆ. ಹೆಚ್ಚೆಂದರೆ, ಕಂಪನಿ ನಾಟಕಗಳು ಸ್ವಾತಂತ್ರ್ಯ ಹೋರಾಟದ ಭಾಗವಾಗಿ ಸೃಷ್ಟಿಸಿಕೊಂಡ ಬ್ರಿಟಿಷ್ ಪಾತ್ರಧಾರಿಗಳ ಕನ್ನಡ ಮಾತ್ರ ಸ್ಟೀರಿಯೊಟೈಪಿನಲ್ಲಿದೆ. ಉಳಿದಂತೆ, ಗರೂಡರ ನಾಟಕಗಳಲ್ಲಿ ಮುಸ್ಲಿಂ ಪಾತ್ರಗಳು ಉರ್ದುವಿನಲ್ಲಿ ಸಹಜವಾಗಿ ಮಾತಾಡುತ್ತವೆ. ಅಲ್ಲಿ ಭಾಷೆಯ ಮೂಲಕ ಜನರನ್ನು ಪರಕೀಯಗೊಳಿಸುವ ಉದ್ದೇಶವಿಲ್ಲ.

> ವೃತ್ತಿಗನ್ನಡವನ್ನು ಸಾಹಿತ್ಯರಚನೆ ಮತ್ತು ತಾತ್ವಿಕ ಚರ್ಚೆಯಲ್ಲಿ ದುಡಿಸಿಕೊಂಡು, ಅವಕ್ಕೆ ಘನತೆ ಗಹನತೆಗಳನ್ನು ಮೊದಲಿಗೆ ಕಲ್ಪಿಸಿದವರು ಶರಣರು. ವ್ಯಾಪಾರಿಗಳು, ಪಶುಗಾಹಿಗಳು, ರೈತರು, ಚಮ್ಮಾರರು, ನೇಕಾರರು, ಸೂಳೆಯರು, ಕಮ್ಮಾರರು ತಮ್ಮ ವೃತ್ತಿ ಪರಿಭಾಷೆಯಲ್ಲಿ ದಾರ್ಶನಿಕ ಚರ್ಚೆ ಮಾಡಿದರು.

ಕನ್ನಡದ ಒಳಚಹರೆಗಳಿಗೆ ಸಿಗುವ ಸರ್ಕಾರಿ ಮನ್ನಣೆ, ನಿಘಂಟುಗಳ ದಾಖಲಾತೀಕರಣ ಹಾಗೂ ಮಾಧ್ಯಮಗಳು ಒದಗಿಸುವ ಸಾಂಕೇತಿಕ ಸ್ಪೇಸುಗಳಿಗೆ ಹೋಲಿಸಿದರೆ, ಮಹತ್ವದ ಸಾಹಿತ್ಯ ಕೃತಿಗಳಲ್ಲಿ ಲಭ್ಯವಾಗುವ ಸೃಜನಶೀಲ ಅನುಸಂಧಾನವು ಹೆಚ್ಚು ಫಲವಂತಿಕೆಯದು. ಇಲ್ಲಿ ಕನ್ನಡದ ಚಹರೆಗಳು ಆಯಾ ಪ್ರದೇಶದ/ಸಮುದಾಯದ ಜೀವನಕ್ರಮ ಮತ್ತು ಲೋಕದೃಷ್ಟಿ ಮಂಡನೆಯ ಭಾಗವಾಗಿ ಮೈದೋರುತ್ತವೆ. ಈ ಹಿನ್ನೆಲೆಯಿಂದ 'ಚೋಮನದುಡಿ', 'ಗ್ರಾಮಾಯಣ', 'ನಿಸರ್ಗ', 'ಮಲೆಗಳಲ್ಲಿ ಮದುಮಗಳು', 'ಕುಸುಮಬಾಲೆ',